**ಸಾಕ್ಷಿಗೆ ದಿನಾಂಕ 24.06.2024 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ. ನಾಗರಾಜ್ ವಕೀಲರಿಂದಃ**

1. ನಾನು ಹೋಗುತ್ತಿದ್ದ ಹೋಂಡಾ ಆ್ಯಕ್ಟೀವಾ ನನಗೆ ಸೇರಿದ್ದು. ನನ್ನ ಡಿ ಎಲ್, ನನ್ನ ವಾಹನದ ಆರ್ ಸಿ ಮತ್ತು ವಿಮೆಯ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ಡಿ ಎಲ್ ಈಗಲೂ ಚಾಲ್ತಿಯಲ್ಲಿ ಇದೆ. ಆ ದಿನ ನನ್ನ ವಾಹನದಲ್ಲಿ ನಾನೊಬ್ಬಳೆ ಹೋಗುತ್ತಿದ್ದೆ, ಬೇರೆ ಯಾರು ಇರಲಿಲ್ಲ.

2. ಅಪಘಾತದ ನಂತರ ನನ್ನನ್ನು ಸಾರ್ವಜನಿಕರು ಅಪಘಾತ ಮಾಡಿದ ಆಟೋದಲ್ಲಿಯೇ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿದ್ದರು. ಮೀನಾಕ್ಷಿ ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು, ನನ್ನ ಸುತ್ತ ಮುತ್ತ ಏನಾಗುತ್ತಿದೆ ಎಂದು ನನಗೆ ಗೊತ್ತಾಗುತ್ತಿತ್ತು ಎಂದರೆ ಸರಿ. ನಾನು ಮೀನಾಕ್ಷಿ ಆಸ್ಪತ್ರೆಗೆ ಹೋದಾಗ ವೈದ್ಯರು ಅಪಘಾತದ ಬಗ್ಗೆ ವಿಚಾರಿಸಿದ್ದು ನಾನು ಅವರಿಗೆ ಅಪಘಾತ ಹೇಗೆ ಆಯಿತು ಎಂದು ಹೇಳಿದ್ದೇನೆ. ಮೀನಾಕ್ಷಿ ಆಸ್ಪತ್ರೆಯವರು ನನಗೆ ಪ್ರಥಮ ಚಿಕಿತ್ಸೆ ಮಾತ್ರ ಮಾಡಿದ್ದರು. ಮೀನಾಕ್ಷಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಕೊಡುತ್ತೀರಾ ಎಂದರೆ ಅವರು ನನಗೆ ಪ್ರಥಮ ಚಿಕಿತ್ಸೆ ಮಾತ್ರ ಮಾಡಿದ್ದರು. ನಾನಾಗಲೀ ಮತ್ತು ನನ್ನ ಗಂಡನಾಗಲೀ ಇಂತಹದೇ ಆಟೋದಿಂದ ಅಪಘಾತವಾಗಿದೆ ಎಂದು ಮೀನಾಕ್ಷಿ ಮತ್ತು ಲೀಲಾವತಿ ಆಸ್ಪತ್ರೆಯಲ್ಲಿ ಆಟೋದ ನಂಬರನ್ನು ಹೇಳಿಲ್ಲ ಎಂದರೆ ಸರಿ. ಅಪಘಾತವಾದ ಒಂದು ದಿನದ ನಂತರ ನಾನು ಲೀಲಾವತಿ ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ಅಲ್ಲಿಗೆ ಬಂದಿದ್ದು

ನನ್ನನ್ನು ವಿಚಾರಣೆ ಮಾಡಿದ್ದಾರೆ. ಆ ದಿನ ನನ್ನಿಂದ ದೂರನ್ನು ಪಡೆದುಕೊಳ್ಳಲು ಬಂದಿದ್ದರು ಎಂದರೆ ಸರಿ. ಅದಕ್ಕಿಂತ ಮೊದಲು ಪೊಲೀಸರು ಬಂದಿಲ್ಲ ಎಂದರೆ ಗೊತ್ತಿಲ್ಲ.

3. ಅಪಘಾತವಾದ ಸ್ಥಳದಲ್ಲಿ ಬೀದಿ ದೀಪಗಳು ಇತ್ತು ರಸ್ತೆಯಲ್ಲಿ ಬರುವ ಮತ್ತು ಹೋಗುವ ವಾಹನಗಳು ಕಾಣುತ್ತವೆ ಎಂದರೆ ಸರಿ. ಅಪಘಾತ ಮಾಡಿದ ವಾಹನ ಮುಂಭಾಗ ಕಪ್ಪು ಬಣ್ಣ ಇತ್ತು. ಅಪಘಾತವಾದ ತಕ್ಷಣ ನಾನು ಗಾಬರಿಯಲ್ಲಿದ್ದೆ ಆದರೂ ನಂಬರನ್ನು ನೋಡಿದ್ದೆ ಆದರೆ ಅಷ್ಟು ಸರಿಯಾಗಿ ಕಾಣಿಸಿರಲಿಲ್ಲ. ಲೀಲಾವತಿ ಆಸ್ಪತ್ರೆಗೆ ಅಪಘಾತ ಮಾಡಿದ ಆಟೋ ಬಂದಿರಲಿಲ್ಲ. ಆಟೋ ಚಾಲಕ ನಮ್ಮ ಜೊತೆ ಬಂದಿದ್ದರು ಮತ್ತು ಅದರ ನಂಬರನ್ನು ಆಸ್ಪತ್ರೆಯಲ್ಲಿ ಎಲ್ಲಿಯೂ ಹೇಳಿಲ್ಲ ಎಂದರೆ ಆಸ್ಪತ್ರೆಗೆ ನಮ್ಮನ್ನು ಬಿಡುತ್ತಿದ್ದ ಹಾಗೆ ಆಟೋ ಚಾಲಕ ಅಲ್ಲಿಂದ ಹೊರಟು ಹೋದರು. ನಾನು ಮುಖ್ಯರಸ್ತೆಯಲ್ಲಿ ಬರುವ ವಾಹನಗಳನ್ನು ಗಮನಿಸದೇ ಏಕಾಏಕಿ ಇಂಜಿನೀಯರಿಂಗ್ ಕಾಲೇಜಿನ ಅಡ್ಡರಸ್ತೆಯಿಂದ ಮುಖ್ಯರಸ್ತೆಗೆ ಬಂದಾಗ ಅಪಘಾತವಾಗಿದ್ದು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

4. ಪೊಲೀಸರು ಮಾಡಿರುವ ಅಪಘಾತದ ಸ್ಥಳದ ಮಹಜರ್ ಮತ್ತು ನಕಾಶೆಯ ಬಗ್ಗೆ ಮಾಹಿತಿ ಇದೆಯಾ ಎಂದರೆ ಅಪಘಾತದ ಸ್ಥಳದ ಬಗ್ಗೆ ನನಗೆ ಗೊತ್ತಿದೆ, ಪೊಲೀಸರು ಏನು ಮಾಡಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ಮಾಡಿದ ನಿಪಿ.5 ರ ಪ್ರಕಾರ ನಾನು

ಅಡ್ಡರಸ್ತೆಯ ಮಧ್ಯದಿಂದ ಮುಖ್ಯ ರಸ್ತೆಗೆ ಬಂದಿದ್ದು ರಸ್ತೆಯ ಮಧ್ಯದಲ್ಲಿ ಅಪಘಾತವಾಗಿದೆ ಎಂದರೆ ಸರಿಯಲ್ಲ, ರಸ್ತೆಯ ಅಂಚಿನಲ್ಲಿ ಆಗಿತ್ತು. ನಿ.ಪಿ.5 ನಕಾಶೆಯಲ್ಲಿ ತೋರಿಸಿರುವುದು ಸರಿಯಿಲ್ಲ ಎಂದು ಪೊಲೀಸರಲ್ಲಿ ಕೇಳಿದ್ದೀರ ಎಂದರೆ ಕೇಳಿದ್ದೆ. ಈ ಬಗ್ಗೆ ದಾಖಲೆ ಇಲ್ಲ, ಮೌಖಿಕವಾಗಿ ಕೇಳಿದ್ದೆ. ನಿ.ಪಿ.5 ರಲ್ಲಿರುವುದನ್ನು ತಿದ್ದುಪಡಿ ಮಾಡಿದ್ದಾರೆ ಎಂದರೆ ಹೇಳಿದ್ದೆವು ಅವರು ಏನು ಮಾಡಿದ್ದಾರೋ ಗೊತ್ತಿಲ್ಲ. ಮುಖ್ಯರಸ್ತೆಯಲ್ಲಿ ಬರುವ ವಾಹನಗಳನ್ನು ಗಮನಿಸದೇ ನಾನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ವಾಹನವನ್ನು ಏಕಾಏಕಿ ಮುಖ್ಯರಸ್ತೆ ತೆಗೆದುಕೊಂಡ ಕಾರಣ ಈ ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

5. ಸಾಕ್ಷಿಗೆ ಭಾವಚಿತ್ರದಲ್ಲಿ ಕಂಡುಬರುವ ಮೂರು ಆಟೋಗಳನ್ನು ತೋರಿಸಲಾಗಿ ಸಾಕ್ಷಿಯು ಹಳದಿ ಮತ್ತು ಕಪ್ಪು ಬಣ್ಣದ ಆಟೋವನ್ನು ನೋಡಿ ಆ ದಿನ ನನಗೆ ಅಪಘಾತ ಮಾಡಿದಾಗ ಆ ಆಟೋ ಹಳದಿ ಮತ್ತು ಕಪ್ಪು ಬಣ್ಣ ಇತ್ತು ಎಂದು ಅಪಘಾತವಾದ ನಂತರ ನೀಲಿ ಬಣ್ಣ ಮಾಡಿಕೊಂಡಿದ್ದಾರೆ ಎಂದು ಆ ಭಾವಚಿತ್ರಗಳನ್ನು ಗುರುತಿಸಿದ್ದು ಅವುಗಳನ್ನು ಸಾಕ್ಷಿಯೇ ಹಾಜರು ಪಡಿಸಿದ್ದು ನ್ಯಾಯಾಲಯದ ಅನುಕೂಲಕ್ಕಾಗಿ ಆ ಭಾವಚಿತ್ರಗಳನ್ನು ನಿ.ಪಿ.19 ರಿಂದ 21 ಎಂದು ಗುರುತಿಸಿದೆ. ನಿ.ಪಿ.19 ರಲ್ಲಿ ಕಂಡುಬರುವ ಆಟೋ ಮತ್ತು ನಿ.ಪಿ.20 ಮತ್ತು 21 ರಲ್ಲಿ ಕಂಡುಬರುವ ಆಟೋ ಬೇರೆ ಬೇರೆ ಎಂದರೆ ಸರಿಯಲ್ಲ. ನಿ.ಪಿ.20 ಮತ್ತು 21 ರಲ್ಲಿರುವ ಆಟೋವನ್ನು ಸದರಿ ಆಟೋದ ಮಾಲೀಕನೇ ಸ್ವಂತ ಬಳಸುತ್ತಿದ್ದು ಆ ಆಟೋದ ನಂಬರನ್ನು ಬೇರೆ ಇನ್ಯಾರೋ

ವ್ಯಕ್ತಿಯುವ ಉಪಯೋಗಿಸಿಕೊಂಡು ನಿ.ಪಿ.19 ರಲ್ಲಿ ಕಂಡುಬರುವ ಆಟೋವನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಅಪಘಾತ ಪಡಿಸಿದ ಆಟೋದ ಚಾಲಕನು ನಿ.ಪಿ.20 ರಲ್ಲಿ ಕಂಡುಬರುವ ಆಟೋದ ನಂಬರನ್ನು ತನ್ನ ಆಟೋದ ಮೇಲೆ ಹಾಕಿಕೊಂಡು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

**6.** ನಾನು ದಾಖಲು ಮಾಡಿದ ದೂರಿನ ಆಧಾರದ ಮೇಲೆ ಪೊಲೀಸರು ತನಿಖೆಯನ್ನು ಮಾಡಿದ್ದರು ಎಂದರೆ ಸರಿ. ನನಗೆ ತಿಳಿದ ಪ್ರಕಾರ ವಾಹನ ಸಿಕ್ಕಿಲ್ಲ ಎಂದು ಸಿ-ವರದಿ ಸಲ್ಲಿಸಿದ್ದಾರೆ ಎಂದು ಗೊತ್ತಾಯಿತು. ಪೊಲೀಸರು ಮಾಡಿದ ತನಿಖೆಯ ಪ್ರಕಾರ ಯಾರೋ ಅನಾಮಿಕ ವ್ಯಕ್ತಿ ಎರಡನೇ ಎದುರುದಾರರ ವಿಮೆಗೆ ಒಳಪಟ್ಟ ನಿ.ಪಿ.20 ರಲ್ಲಿ ಕಂಡು ಬರುವ ಆಟೋದ ನಂಬರನ್ನು ಇನ್ನೊಂದು ಆಟೋಗೆ ಕಾನೂನು ಬಾಹೀರವಾಗಿ ಅಳವಡಿಸಿಕೊಂಡು ಉಪಯೋಗ ಮಾಡುತ್ತಿದ್ದು, ಆತ ಮತ್ತು ಆಟೋ ಸಿಕ್ಕಿಲ್ಲ ಎಂದು ಸಿ-ವರದಿ ಸಲ್ಲಿಸಿದ್ದಾರೆ ಎಂದರೆ ಸರಿ ಅದನ್ನು ಪ್ರಶ್ನಿಸಿ ತಕರಾರನ್ನು ಹಾಕಿದ್ದೇವೆ. ನಾನು ಸಿ ವರದಿಯನ್ನು ಪ್ರಶ್ನಿಸಿದ ನಂತರ ಪೊಲೀಸರು ತನಿಖೆಯನ್ನು ಮುಂದುವರೆಸಿದ್ದು ಫೋಟೊದಲ್ಲಿ ತೋರಿಸಿದ ಆಟೋವು ಈಗಲೂ ಪೊಲೀಸ್ ಠಾಣೆಯಲ್ಲಿ ಇದೆ. 1 ನೇ ಎದುರುದಾರರ ವಿರುದ್ಧ ಈವರೆಗೂ ಪೊಲೀಸರು ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಮಾಡುತ್ತಿದ್ದಾರೆ. ನನಗೆ ಆಗಿರುವ ಅಪಘಾತಕ್ಕೂ ಮತ್ತು ಒಂದನೇ ಎದುರುದಾರನ ಆಟೋಗು ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**7.** ನನ್ನ ವೈದ್ಯಕೀಯ ಖರ್ಚಿಗೆ ನಾನು ಹೇಳಿದಷ್ಟು ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ಹೆಚ್ಚು ಪರಿಹಾರ ಪಡೆಯಲು ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವೃತ್ತಿಯಲ್ಲಿ ಟೈಲರಿಂಗ್ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ನನ್ನ ಆದಾಯದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಕಟ್ಟುತ್ತಿಲ್ಲ ಮತ್ತು ಐ ಟಿ ಯನ್ನು ಸಲ್ಲಿಸುತ್ತಿಲ್ಲ. ನಾನು ಟೈಲರಿಂಗಿಗೆ ತರಬೇತಿ ಪಡೆದ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ತುಂಬಾ ಹಿಂದೆ ಕಲಿತದ್ದು ದಾಖಲೆಗಳು ಇಲ್ಲ. ನನಗೆ ಒಂದು ವೇಳೆ ಈ ಅಪಘಾತದಿಂದ ನಷ್ಟವಾಗಿದ್ದರೆ ಅದು ಅನಾಮಿಕ ಆಟೋದ ಚಾಲಕನ ತಪ್ಪಿನಿಂದ ಆಗಿದೆ, ಎದುರುದಾರರ ಆಟೋದ ತಪ್ಪಿನಿಂದ ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**